ವಕೀಲರಾಗಿದ್ದ ಡಿ.ಎಲ್. ಪಾಟೀಲರ ಮಗಳು ಸೋನಕ್ಕನ ಜೊತೆ, 1964ರ ಮಾರ್ಚ್ 2ರಂದು ಧಾರವಾಡದ ಟ್ಯಾಗೋರ್ ಹಾಲ್‌ನಲ್ಲಿ ನಡೆಯಿತು. ಗೋಪಾಲಗೌಡರು, ಸಮಾಜವಾದಿ ಪಕ್ಷದಿಂದ, ಮೈಸೂರು ಶಾಸನ ಸಭೆಯ ಸದಸ್ಯರಾಗಿ, ಆಗ ಎರಡನೆಯ ಸಲ ಆರಿಸಿ ಬಂದಿದ್ದರು. ಅನೇಕ ಜೀವಸಂಕುಲಗಳಿಗೆ ಆಶ್ರಯ, ನೆರಳು ನೀಡುವ ಅಸಂಖ್ಯ ಬಿಳಲುಗಳ ಆಲದ ಮರ ಅವರ ಚುನಾವಣೆ ಚಿಹ್ನೆಯಾಗಿತ್ತು. ಈ ಮದುವೆ ನಮಗೆಲ್ಲ ದೊಡ್ಡ ಸುದ್ದಿಯಾಗಿತ್ತು. ಆಗ ಸಮೀಪದ ಊರಿನವರು, ತಮ್ಮ ಜಾತಿಯವರು ಇಲ್ಲವೆ ಕಳ್ಳುಬಳ್ಳಿಯ ಸಂಬಂಧಗಳಲ್ಲೇ ಮದುವೆ ಮಾಡುವ/ಆಗುವ ಪರಿಪಾಠವಿತ್ತು. ಅಂಥ ಕಾಲದಲ್ಲಿ, ಪಾಟೀಲ ವಕೀಲರು ಇದಕ್ಕೆ ಹೊರತಾದ ರೀತಿಯಲ್ಲಿ, ಮಗಳನ್ನು ಕೊಟ್ಟು ಮದುವೆ ಮಾಡಿದ್ದು 'ಕುತೂಹಲದಿಂದ ಗುಸುಗುಸು ಮಾತಾಡುವ ಸುದ್ದಿಯೇ' ಆಗಿತ್ತು. ಆ ಕಾಲವೇ ಹಾಗಿತ್ತು. ಶಿವಮೊಗ್ಗದ ಕಡೆಯಿಂದ ಬಂದಿದ್ದ, ಕ್ರಾಂತಿಕಾರಕ ವಿಚಾರದ ತಮ್ಮ ಗೆಳೆಯನಿಗೆ ಪಾಟೀಲ ವಕೀಲರು ಮಗಳನ್ನು ಕೊಟ್ಟು, ಅತ್ಯಂತ ಸರಳ ರೀತಿಯಲ್ಲಿ ಮದುವೆ ಮಾಡಿದ್ದರು. ಸೋನಕ್ಕ ಆಗ ಸರ್ಕಾರಿ ಹೆಣ್ಣುಮಕ್ಕಳ ಶಿಕ್ಷಕ ತರಬೇತಿ ಕಾಲೇಜಿನಲ್ಲಿ ಮುಖ್ಯ ಶಿಕ್ಷಕಿಯಾಗಿದ್ದರು. ಮದುವೆಯಾದ ನಂತರವೂ, ಗೋಪಾಲಗೌಡರು ತಾವು ಶಿವಮೊಗ್ಗ ಅಥವಾ ಬೆಂಗಳೂರಲ್ಲಿ ಸೆಟಲ್ ಆಗುವವರೆಗೆ ಸೋನಕ್ಕ ಧಾರವಾಡದಲ್ಲಿಯೇ ಇರಲಿ ಎಂದು ನಿರ್ಧರಿಸಿದ್ದ ಹಾಗಿತ್ತು. ಶಿವಮೊಗ್ಗ ಜಿಲ್ಲೆಯ, ತೀರ್ಥಹಳ್ಳಿಗೆ ಹತ್ತಿರವಿದ್ದ ಆರಗ ಎಂಬ ಹಳ್ಳಿಯ, ಶಾಸಕ ಗೋಪಾಲಗೌಡರು ಧಾರವಾಡದ ಕನ್ಯೆಯನ್ನು ಮದುವೆಯಾಗಿ ನಮ್ಮ ಊರಿನ ಅಳಿಯಂದಿರಾಗಿದ್ದು, ನಮಗೆ ಮತ್ತೊಂದು ದೃಷ್ಟಿಯಿಂದ ಹೇಳಿಕೊಳ್ಳುವ ಹೆಮ್ಮೆಯ ಸಂಗತಿಯಾಗಿತ್ತು. ಆಗ ಗೌಡರು ತಮ್ಮ ಶಾಂತವೇರಿಯನ್ನು ಸೇರಿಸಿಕೊಂಡೇ 'ಎಸ್. ಗೋಪಾಲಗೌಡ' ಎಂದು ಹೇಳುತ್ತಿದ್ದರು, ಬರೆಯುತ್ತಿದ್ದರು. ಅವರ ಗೆಳೆಯರು ಮಾತ್ರ ಅಕ್ಕರೆಯಿಂದ 'ಗೋಪಾಲ' ಎಂದೇ ಕರೆಯುತ್ತಿದ್ದರು.

2

ಗೋಪಾಲಗೌಡರನ್ನು ಬಹಳ ಹತ್ತಿರದಿಂದ ನೋಡುವ, ಮಾತನಾಡುವ ಅವಕಾಶ ಸಿಕ್ಕಿದ್ದು ನನ್ನ ಆತ್ಮೀಯ ಮಿತ್ರ ಡಾ. ಎಚ್.ಸಿ. ವಿಷ್ಣುಮೂರ್ತಿ ಅವರಿಂದ. ವಿಷ್ಣುಮೂರ್ತಿಯವರು ಸಹ ಗೋಪಾಲಗೌಡರ ತೀರ್ಥಹಳ್ಳಿ ತಾಲ್ಲೂಕಿನ ಯಡೂರಿನವರು. ಅವರು ಗೌಡರನ್ನು, ಅವರ ಅನುಯಾಯಿಗಳನ್ನು, ಶಿಷ್ಯರು, ಮಿತ್ರರೆಲ್ಲರನ್ನೂ ಬಹಳ ಹತ್ತಿರದಿಂದ ಬಲ್ಲವರಾಗಿದ್ದರು. ಬಹುಶಃ 1952ರಿಂದ ತಮ್ಮ ಶಾಲಾ ದಿನಗಳಿಂದಲೇ ಗೋಪಾಲಗೌಡರನ್ನು, ಅವರ ಬದುಕಿನ ವಿವಿಧ ಆಯಾಮಗಳನ್ನು ಕಂಡು, ತಿಳಿದವರಾಗಿದ್ದರು. ಗೋಪಾಲಗೌಡರು ಸಹ ವಿಷ್ಣುಮೂರ್ತಿಯವರನ್ನು ತಮ್ಮ ಕುಟುಂಬದ ಒಬ್ಬ ಸದಸ್ಯರಂತೆಯೇ ಪ್ರೀತಿಸುತ್ತಿದ್ದರು ಎಂದು ಕೇಳಿ ತಿಳಿದಿದ್ದೆ. ಗೌಡರು ಧಾರವಾಡ ಹುಬ್ಬಳ್ಳಿ ಕಡೆಗೆ ಬಂದಾಗ ಹುಬ್ಬಳ್ಳಿಗೆ ಹೋಗಿ, ಆಗ ಕೆಎಂಸಿಯಲ್ಲಿದ್ದ (ಈಗಿನ ಕಿಮ್ಸ್) ಡಾ. ವಿಷ್ಣುಮೂರ್ತಿಯವರನ್ನು ಕಂಡೇ ಹೋಗುತ್ತಿದ್ದರು.

ವಿಷ್ಣುಮೂರ್ತಿ ಒಂದು ವರ್ಷ ಕರ್ನಾಟಕ ಕಾಲೇಜಿನಲ್ಲಿ ಪಿ.ಪಿ.ಸಿ. ಮಾಡಿಕೊಂಡು, ನಂತರ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಕಲಿಯುತ್ತಿದ್ದರು; ಆ ದಿನಗಳಲ್ಲಿಯೇ, ತಮ್ಮ ಮಿತ್ರಮಂಡಳಿಯೊಂದಿಗೆ, ಧಾರವಾಡದಲ್ಲಿ ನಡೆದ ಗೋಪಾಲಗೌಡರ ಮದುವೆಗೂ ಬಂದಿದ್ದರು. ವಿಷ್ಣುಮೂರ್ತಿ ಮೊದಲಿನಿಂದಲೂ ಸಾಹಿತ್ಯಪ್ರೇಮಿ, ಒಳ್ಳೆಯ ಕವಿ. 'ಕಾರವಾನ', 'ಹಿಂಡು' ಮುಂತಾದ ಕವನಸಂಗ್ರಹ ಪ್ರಕಟಿಸಿದ್ದರು. ಹುಬ್ಬಳ್ಳಿ, ಧಾರವಾಡದ ಯಾವ ಸಾಹಿತ್ಯಿಕ ಕಾರ್ಯಕ್ರಮವನ್ನೂ ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಹುಬ್ಬಳ್ಳಿಯ ಸಾಹಿತ್ಯ ಮಂಟಪವನ್ನು ಆರಂಭದ ದಿನಗಳಲ್ಲಿ ಗಂಗಪ್ಪ ವಾಲಿ, ಅಬ್ದುಲ್ ಮಜೀದ್ ಖಾನ್, ಪಾ.ವೆಂ. ಆಚಾರ್ಯ, ಬುದ್ದಣ್ಣ ಹಿಂಗಮಿರೆಯವರ ಜೊತೆಗೆ ಅತ್ಯಂತ ನಿಯಮಿತವಾಗಿ ನಡೆಸುತ್ತಿದ್ದರು. ಶಾಂತಿನಾಥ ದೇಸಾಯಿ, ಚಂಪಾ, ಮೊಕಾಶಿ ಮುಂತಾದ ನಮ್ಮಂಥ ಧಾರವಾಡದ ಸಾಹಿತಿ ಮಿತ್ರರನ್ನೂ ಕರೆಸಿಕೊಂಡು ಕಾವ್ಯವಾಚನ, ಚರ್ಚೆ ಇತ್ಯಾದಿ ಏರ್ಪಡಿಸುತ್ತಿದ್ದರು. ನಾನು ಮಿತ್ರರ ಜೊತೆ 'ಸಂಕ್ರಮಣ' ನಡೆಸುತ್ತಿದ್ದೆ. ವಿಷ್ಣುಮೂರ್ತಿಯ ಪ್ರೀತಿಯ ಒತ್ತಾಸೆಯಿಂದ ಹುಬ್ಬಳ್ಳಿಯಲ್ಲಿ ಅನೇಕ ಜನರು ಸಂಕ್ರಮಣದ ಬಳಗಕ್ಕೆ ಸೇರಿಕೊಂಡಿದ್ದರು. ಪ್ರತಿ ಸಲ ಸಂಚಿಕೆಯನ್ನು ಕೊಡಲು